**Samyukta Karnataka, Bangalore – 12.7.11**

# ನಗರದಲ್ಲಿ ಟಿಸಿಎಸ್ ರಸಪ್ರಶ್ನೆ

ಬೆಂಗಳೂರು, ಜು. 11: ಟಾಟಾ ಕನ್ಸಲ್‌ಟೆನ್ಸಿ ಸರ್ವಿಸಸ್ ಸಂಸ್ಥೆ ಬೆಂಗಳೂರು ವಿಭಾಗದ ಟಿಸಿಎಸ್ ಐಟಿ ರಸಪ್ರಶ್ನೆ ಕಾರ್ಯಕ್ರಮವನ್ನು ಚೌಡಯ್ಯ ಸ್ಮಾರಕಭವನದಲ್ಲಿ ಜು. 27 ರಂದು ಏರ್ಪಡಿಸಿದೆ.

8ನೇ ತರಗತಿಯಿಂದ ದ್ವಿತೀಯ ಪಿಯುಸಿ ಓದುತ್ತಿರುವ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಪ್ರತಿ ಶಿಕ್ಷಣ ಸಂಸ್ಥೆಯಿಂದ ಇಬ್ಬರು ವಿದ್ಯಾರ್ಥಿಗಳನ್ನು ಒಳಗೊಂಡ 8 ತಂಡ ಕಳುಹಿಸಬಹು ದಾಗಿದೆ. ಸ್ಥಳೀಯ ರಸಪ್ರಶ್ನೆ ಸ್ಪರ್ಧೆ ಬೆಂಗಳೂರು, ಅಹಮದಾಬಾದ್, ಚೆನ್ನೈ ಒಳಗೊಂಡಂತೆ ದೇಶದ 12 ನಗರಗಳಲ್ಲಿ ನಡೆಯಲಿದೆ. ಸ್ಥಳೀಯ ಸ್ಪರ್ಧೆ ನಂತರ ರಾಷ್ಟ್ರೀಯ ಸ್ಪರ್ಧೆ ಡಿಸೆಂಬರ್‌ನಲ್ಲಿ ನಡೆಯಲಿದೆ.

ಗೆದ್ದ 12 ಸ್ಥಳೀಯ ತಂಡಗಳು ಟಿಸಿಎಸ್ ಐಟಿ ರಾಷ್ಟ್ರ ವಿಜೇತ ಸ್ಪರ್ಧೆಯಲ್ಲಿ ಸೆಣಸಲಿವೆ. ಶಿಕ್ಷಣ ಸಂಸ್ಥೆಗಳು ಜು. 22 ರೊಳಗೆ ನೋಂದಣಿ ಮಾಡಿಕೊಳ್ಳಲು ಕೋರಿದ್ದು, ಹೆಚ್ಚಿನ ಮಾಹಿತಿಗಾಗಿ www.tcsitwiz.com ಹಾಗೂ ದೂರವಾಣಿ ಸಂಖ್ಯೆ: 080 67246000ಗೆ ಕರೆಮಾಡಬಹುದಾಗಿದೆ.